


## ಬೆಚ್ಚಿ ಬೀಳಿಸಿದ ಅಂತರ್ಜಾಲ ಸೆಕ್ಸ್!

ರಶ್ಮಿ ಎಸ್. ಅವರ ಮುಖಪುಟ ಲೇಖನ 'ಅಂತರ್ಜಾಲ ಸೆಕ್ಸ್!' ಓದಿ ಬೆಚ್ಚಿಬೀಳುವಂತಾಯಿತು. ಪಾಲಕರು ಮಕ್ಕಳ ಬಗ್ಗೆ –ಅವರ ಅರಿವಿಗೆ ಬಾರದಂತೆ– ಗಮನಹರಿಸಲು ಸೂಚಿಸಿರುವುದು ಸ್ವಾಗತಾರ್ಹ.

–ಸು. ವಿಜಯಲಕ್ಷ್ಮಿ, ಪಿ.ಗೋವಿಂದರಾಜ್, ಶಿವಮೊಗ್ಗ/ ಆರ್.ರಮಾ, ಸುಶೀಲಮ್ಮ, ಬೆಂಗಳೂರು/ ಪಿ.ಶಶಿರೇಖ, ಪಿ.ಸುಶೀಲ, ಮೈಸೂರು

## ಸಕಾಲಿಕ ಲೇಖನ

'ಸಣ್ಣ ಕಾಡುಗಳನ್ನು ಉಳಿಸುವುದು ಹೇಗೆ?' ಪೂರ್ಣೇಶ ಹೆಚ್.ಸಿ. ಲೇಖನ ಸಕಾಲಿಕ, ಅರ್ಥಪೂರ್ಣ.

–ಎಂ.ಎಲ್. ಲಕ್ಷ್ಮಣ್‌ರಾವ್, ದಾವಣಗೆರೆ

## ಭೂಮಿ ತೂಕ!

'ತಿನ್ನುವುದೆಲ್ಲಾ...' (ವಂಡರ್‌ಪುಟ) ಬದುಕಿನಲ್ಲಿ ಎಂತಾದರಿರಲಿ, ಸತ್ತಮೇಲೆ ಯಾರೂ ನಾಲ್ಕು ಮಂದಿಗೆ ಅಷ್ಟಿಷ್ಟು ಭಾರವಾಗುವುದು ತಪ್ಪದು. ಆದರೆ ಆ 'ಮಹಾ' ಮಹಿಳೆ ಎಷ್ಟು ಜನಕ್ಕೆ ಭಾರವಾಗುತ್ತಾಳೊ! 'ಭೂಮಿ ತೂಕದವರು' ಎಂಬ ನುಡಿಗಟ್ಟು ಇಂಥವರನ್ನೆ ಕುರಿತದ್ದೆ?

–ಸಿಪಿಕೆ, ಮೈಸೂರು

## ಸ್ತ್ರೀಯರಿಗೆ ಮೋಹಕ ಬಳೆ

'ಬಳೆ ಬಳೆ ಬಿನ್ನಾಣ...' ಉಮಾ ವೇಣೂರರ ಬರಹವು ಚಿತ್ರದೊಂದಿಗೆ ಚೆನ್ನಾಗಿ ಮೂಡಿಬಂದಿವೆ. ಚಿನ್ನದ ಬೆಲೆ ಗಗನಕ್ಕೆ ಏರಿದೆ. ಗಾಜಿನ ಬಳೆಗಳೇ ಈಗ ಸರಿ.

–ಮಹಾಲಿಂಗ. ಎಂ. ಗೋರಬಾಳ, ಮಾಣಿಕವಾಡಿ

## ಅಕ್ಷರ ನಡಿಗೆ ಅನನ್ಯ

'ಅಕ್ಷರ ಶಕ್ತಿ' ಕುರಿತು ವೈನತೇಯರ ವಿಚಾರ ಲಹರಿ ಅನನ್ಯವಾಗಿತ್ತು.

–ಎಚ್. ಆನಂದ್‌ಕುಮಾರ್, ಚಿತ್ರದುರ್ಗ

## ಸೊಗಸಾದ ಪ್ರವಾಸ

'ಕನ್ಯಾಕುಮಾರಿಯಲ್ಲಿ ಕಂಡದ್ದು–ಕಾಣದ್ದು' ಪರಂಜ್ಯೋತಿ ಲೇಖನ ಸೊಗಸಾಗಿ ಓದಿಸಿಕೊಂಡು ಹೋಯಿತು.

–ನೆ.ಲ.ರಾಂ., ಬೆಂಗಳೂರು/ ಮೊಳಕಾಲ್ಮುರು ಸುರೇಶ, ಬಳ್ಳಾರಿ/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

## ಕಣ್ಣು ತೆರೆಸಿದ ಬರಹ

'ಎಲ್ಲರ ಮನೆಯಲ್ಲೂ ಸ್ವಂತ ಕರೆಂಟ್!' ಚೇತನರಾಂ ಇರಂತಕಜೆ ಅವರ ಲೇಖನವು ಗುಡ್ಡಗಾಡು ಪ್ರದೇಶದ ಜನರ ಕಣ್ಣು ತೆರೆಸಿದಂತಾಗಿದೆ.

ವೈ.ಯಂ.ಚಂದ್ರಶೇಖರ್, ಸಿದ್ದಾಪುರ

## ಅರ್ಥಪೂರ್ಣ ಕಾರ್ಟೂನ್

ಕೈಗೊಂಬೆಯಾಗಿರುವ ಮುಖ್ಯಮಂತ್ರಿ ಗೌಡರ ಕುರಿತು ಮಹಮ್ಮದ್‌ರ ಕಾರ್ಟೂನ್ ಅರ್ಥಪೂರ್ಣವಾಗಿದೆ.

–ಎಂ.ಎಲ್.ಎಲ್. ರಾವ್, ದಾವಣಗೆರೆ

## ಅರ್ಥಪೂರ್ಣ ಯಶಸ್ಸು

'ನಾಟಕದ ಯಶವಂತ' ಕುರಿತು ಗುಡಿಹಳ್ಳಿ ನಾಗರಾಜ ಅವರ ಲೇಖನ ಅರ್ಥಪೂರ್ಣವಾಗಿತ್ತು.

–ರವೀಂದ್ರನಾಥ. ಶಿ. ಯಡಹಳ್ಳಿ, ಬೀಳಗಿ/ ಶೈಲಜಾ ಭಿಂಗೆ, ಬೆಳಗಾವಿ/ ರಾಜಶೇಖರ ಗೌಡ, ಕೊಟ್ಟೂರು

## ಖುಲಾಯಿಸಿದ ಅದೃಷ್ಟ

ಪಕ್ರುದ್ದೀನ್ ಇರುವೈಲ್ ಅವರ 'ಹೀಗೊಂದು ಸಂಕಟದ ಪ್ರಸಂಗ' ಕಥೆ ಸೊಗಸಾಗಿ ಮೂಡಿಬಂದಿದೆ. 'ಕುರು' ಆದ್ರೆ ಅದೃಷ್ಟವೆಂಬ ಪ್ರತೀತಿ ಇದೆ. ಖತೀಬರಿಗೆ 'ಕುರು' ಆಗಿ ಅದೃಷ್ಟ ಖುಲಾಯಿಸಿತು! 'ಕುರು' ಸಂಪೂರ್ಣವಾಗಿ ವಾಸಿಯಾದುದಲ್ಲದೆ ಮಗಳ ಮದುವೆಯೂ ಆಯಿತು.

–ಹೆಚ್.ಎನ್. ವಿಶ್ವನಾಥ್, ಶಿವಮೊಗ್ಗ

## ವಾಲ್ಮೀಕಿ ರಾಮಾಯಣದಲ್ಲಿ ಇದೆ

ಚಂದ್ರಯ್ಯ ಶ್ರೀರಾಂಪುರ ಎಂಬುವರು ನನ್ನ ಕಥೆ 'ರಾಜಧರ್ಮ'ದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಹೇಳುವುದರ ಜತೆಗೆ, ವಾಲಿ ಸುಗ್ರೀವನನ್ನು ರಾಜ್ಯದಿಂದ ಹೊರಹಾಕಿದ ನಂತರ ಆತನ ಪತ್ನಿ ರುಮೆಯಲ್ಲಿ ಆಸಕ್ತನಾಗಿದ್ದರ ಬಗ್ಗೆ ವಾಲ್ಮೀಕಿ ರಾಮಾಯಣದಲ್ಲಿ ಇದೆಯೇ? ಎಂದು ಪ್ರಶ್ನಿಸಿದ್ದಾರೆ. ವಾಲ್ಮೀಕಿ ರಾಮಾಯಣದ ಕಿಷ್ಕಿಂದಾ ಕಾಂಡದ 18ನೇ ಸರ್ಗದಲ್ಲಿನ 18,19 ಹಾಗೂ 20ನೇ ಶ್ಲೋಕಗಳಲ್ಲಿ ಈ ಬಗ್ಗೆ ಸ್ಪಷ್ಟವಾಗಿ ಹೇಳಲಾಗಿದೆ.

ಬಿ. ತಿಪ್ಪಣ್ಣ ಮರಿಕುಂಟೆ, ಚಳ್ಳಕೆರೆ

## ವೈಚಾರಿಕ ಶಕುನ!

'ಕೆಲವು ಶಕುನಗಳು' ವೈ–ಚಾರಿಕವಾಗಿವೆ.

–ಲೋಕಪ್ರಿಯ, ಚಿಂತಾಮಣಿ

## ರಕ್ತನಾಳಗಳ ಸಮಸ್ಯೆಯೆ?

ನಿಮ್ಮ ಪುಟದ 'ಬಣ್ಣ ಬದಲಿಸುವ ಬಾಲೆ' ಕುತೂಹಲ ಮೂಡಿಸಿತು. ಇದು ಖಂಡಿತ ಚರ್ಮದ ಸಮಸ್ಯೆಯಲ್ಲ. ಶುದ್ಧ ರಕ್ತನಾಳ ಹಾಗೂ ಮಲಿನ ರಕ್ತನಾಳಗಳು ಪ್ರತ್ಯೇಕವಾಗಿರುವುದರ ಬದಲು ಒಂದಕ್ಕೊಂದು ಸೇರಿಕೊಂಡಿರಬಹುದು ಅಥವಾ ಅಪಧಮನಿಗಳ ಕವಾಟ ನಿಷ್ಕ್ರಿಯವಾಗಿರಬಹುದು. ಹುಟ್ಟಿದಾಗಿನಿಂದಲೇ ಈ ಸಮಸ್ಯೆ ಇರುವುದು, ಆ ಕೈ ಸ್ವಲ್ಪ ದೊಡ್ಡದಾಗಿರುವುದು– ಎರಡೂ ಇದಕ್ಕೆ ಪುಷ್ಟಿ ನೀಡುತ್ತವೆ. ಮುಂಜಾನೆಯಿಂದ ಸಂಜೆಯವರೆಗೂ ಕೈಯನ್ನು ಕೆಳಗೆ ಬಿಟ್ಟಿರುವ ಕಾರಣ ಮಲಿನರಕ್ತ ಹೃದಯವನ್ನು ಸೇರದೆ ಕೈ ನೀಲಿಬಣ್ಣಕ್ಕೆ ತಿರುಗುತ್ತದೆ.

ಶೀಘ್ರವಾಗಿ ತಜ್ಞರನ್ನು ಕಾಣುವ ಅಗತ್ಯವಿದೆ. ಸಂಘ ಸಂಸ್ಥೆಗಳು, ದಾನಿಗಳು ಇದಕ್ಕೆ ಮುಂದಾಗಲಿ.

–ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

## ಚಿತ್ರ ಬದಲಾಗಿತ್ತು

ಆಗಸ್ಟ್ 18 ರ ಸಂಚಿಕೆಯಲ್ಲಿ ಎಫ್ ಎಂ ರೇಡಿಯೋ ಜಾಕಿ ರೋಹಿತ್ ಅವರ ಬದಲಿಗೆ ಇನ್ನೊಬ್ಬ ರೋಹಿತ್ ಚಿತ್ರ ಪ್ರಕಟವಾಗಿತ್ತು. ಈ ಚಿತ್ರ ರೋಹಿತ್ ಅವರದ್ದು.







ಕೇರಳದ ಮಾಂತ್ರಿಕ ಜ್ಯೋತಿಷ್ಯರು ॐ ✝ ☪

ಕೇರಳದ ಮಳಿಯಾಳಿ ಕುಟ್ಟಿಚ್ಚಾತನ್‌ನಿಂದ ಶೀಘ್ರ ಪರಿಹಾರವಿದೆ.

ಹಲವಾರು ವರ್ಷಗಳಿಂದ ಪ್ರಸಿದ್ಧಿ ಪಡೆದಿರುವ ಇವರು ನಿಮ್ಮ ಭವಿಷ್ಯವನ್ನು ಹಸ್ತ, ಜಾತಕ, ರಾಶಿ ಪ್ರಶ್ನೆ, ಅಷ್ಟಮಂಗಳ ಪ್ರಶ್ನೆಯಿಂದ ತಿಳಿಸುತ್ತಾರೆ. ಉದಾ: ವಿದ್ಯೆ, ಉದ್ಯೋಗ, ವ್ಯಾಪಾರ, ವಿವಾಹ, ಸ್ತ್ರೀ ಪುರುಷ ವಶೀಕರಣ, ಮಾನಸಿಕ ಚಿಂತೆ, ಸಾಲದ ಬಾಧೆ, ಸತಿ-ಪತಿ ಕಲಹ, ಸಂತಾನ ದೋಷ, ಮರಣ ಭಯ, ಆರೋಗ್ಯ, ಮಾಟ ಕೃತಿಮ, ಬ್ರಹ್ಮ ಪಿಶಾಚಿಗಳಿಗೆ ಹಾಗೂ ಇನ್ನಿತರ ನಿಮ್ಮ ಯಾವುದೇ ರೀತಿಯ ಸಮಸ್ಯೆಗಳಿಗೆ ಶೀಘ್ರ ಪರಿಹಾರಕ್ಕಾಗಿ ಸಂಪರ್ಕಿಸಿ:

ವಿಳಾಸ: ಎಸ್. ಪೊದುವಾಳ್, ಕಾರ್ಲ ಟವರ್ಸ್, 1ನೇ ಮಹಡಿ, ಮಣ್ಣಗೋಪುರ ಬಳಿ ಮುಖ್ಯರಸ್ತೆ, ಕಾರ್ಕಳ (ದ.ಕ.)

ಪ್ರತಿ ತಿಂಗಳು ದಿ. 10 ರಿಂದ 13ರವರೆಗೆ ಹಾಸನದಲ್ಲಿ ಸಂಪರ್ಕಿಸಬಹುದು.

ಮೊ: 98445 54918, 94493 87974
ದೂರವಾಣಿ ಮುಖಾಂತರವು ವಿವರಗಳನ್ನು ಪಡೆಯಬಹುದು

ವಿ.ಸೂ.: ಸ್ತ್ರೀ–ಪುರುಷ ವಶೀಕರಣಕ್ಕೆ, ಗಂಧರ್ವ ಸಂಮ್ಮೋಹಿನಿ ಯಂತ್ರವನ್ನು ಮಾಡಿಕೊಡಲಾಗುವುದು.